ಆಗಮಿಸಿದ್ದರು. ಆ ಫೋಟೊವನ್ನು ನೀಡಿದ್ದರು. ಈ ಎಲ್ಲ ದಾಖಲೆಗಳನ್ನು ಪೂರೈಸಿದ ನಂತರ ಕಾರಂತ ಶಾಂತರಾದರು!

'ಕರ್ನಾಟಕದಲ್ಲಿ ಅವೈದಿಕ ಸಾಹಿತ್ಯ ಪರಂಪರೆ'ಯ ಕಾಲಕ್ಕೆ ರಂ.ಶಾ. ನನಗೆ ನೀಡಿದ್ದ ಸಂದರ್ಶನವೂ ವಿವಾದಕ್ಕೀಡಾಯಿತು. ಅವರ ಹೇಳಿಕೆ ಪತ್ರಿಕೆಯಲ್ಲಿ ಪ್ರಕಟವಾದಾಗ ಅವರ ಮೇಲೆ ದೈಹಿಕ ಹಲ್ಲೆಯೂ ನಡೆಯಿತು. ಇದರಿಂದ ಅವರು ತುಂಬ ನೊಂದುಕೊಂಡರು.

ದೊಡ್ಡ ಹುದ್ದೆಯಲ್ಲಿದ್ದು ನಿವೃತ್ತಿಯಾಗಿ ಸಾಕಷ್ಟು ನಿವೃತ್ತಿ ವೇತನವನ್ನು ಪಡೆಯುತ್ತಿದ್ದರೂ ಅವರು ಬೆಳಗಾವಿಯಲ್ಲಿ 'ಪ್ರಶಾಂತ ಪೇಪರ್ ಮಾರ್ಟ್' ಎಂಬ ಕಾಗದ ಮಾರುವ ಅಂಗಡಿಯನ್ನು ಹಾಕಿದ್ದರು. ಈ ಅಂಗಡಿಯು ಬೆಳಗಾವಿಯ ಶೇರಿಗಲ್ಲಿಯ ಕೊನೆಗೆ, ಮಠಗಲ್ಲಿಯ ಆರಂಭದಲ್ಲಿತ್ತು. ಈ ಅಂಗಡಿ ಎಷ್ಟು ಸಣ್ಣದಿದ್ದಿತೆಂದರೆ ಅವರನ್ನು ಬಿಟ್ಟು ಬೇರೆ ಯಾರಿಗೂ ಅಲ್ಲಿ ಕೂಡ್ರುವ ಅವಕಾಶವಿರಲಿಲ್ಲ. ಬಹಳ ಎಂದರೆ ಮೂರು X ನಾಲ್ಕು ಫೂಟಿನ ಅಂಗಡಿ ಅದು. ಒಳಗೆ ಕುಳಿತುಕೊಂಡು ಒಂದಾಣೆ, ಎರಡಾಣೆಗೆ ಬಿಳಿ ಕಾಗದಗಳನ್ನು, ಲಕೋಟೆಗಳನ್ನು ಮಾರುತ್ತಿದ್ದರು. ನಾನು, ಚಂದ್ರಕಾಂತ ಪೋಕಳೆ, ರಾಮಕೃಷ್ಣ ಮರಾಠೆ, ಎ.ಬಿ. ಘಾಟಗೆ, ರವಿ ಕೋಟಾರಗಸ್ತಿ ಹೀಗೆ ಗೆಳೆಯರು ವಾರದಲ್ಲಿ ಒಂದೆರಡು ಸಲವಾದರೂ ಅವರ ಅಂಗಡಿಗೆ ಭೇಟಿ ಕೊಡುತ್ತಿದ್ದೆವು. ನಾವು ಬಂದರೆಂದರೆ ಅಂಗಡಿಯನ್ನು ಹಾಗೆಯೇ ಬಿಟ್ಟು ರಸ್ತೆಯ ಈ ಬದಿಗೆ ಇದ್ದ ಹೂವು ಮಾರುವ ಒಬ್ಬ ಸಾಬಿಗೆ 'ಜರಾ ದುಕಾನ್ ದೇಖೋ' ಎಂದು ಹೇಳಿ ನಮ್ಮೊಂದಿಗೆ ಹಾಫ್‌ಕಪ್ ಚಹಾ ಕುಡಿಯಲು ಹೊರಡುತ್ತಿದ್ದರು. ಅವರ ಅಂಗಡಿ ಊಟದ ಸಮಯದಲ್ಲೂ ತೆರೆದಿರುತ್ತಿತ್ತು. ಅವರಿಲ್ಲದಾಗ ಹೂವು ಮಾರುವ ಸಾಬಿಯೇ ಅದರ ಮಾಲೀಕನಾಗಿರುತ್ತಿದ್ದ!

ಪತ್ನಿ ತೀರಿಕೊಂಡ ನಂತರ ರಂ.ಶಾ. ಮಾನಸಿಕವಾಗಿ ದುರ್ಬಲರಾದರು. ಅವರು ಬೆಳಗಾವಿಯಲ್ಲಿಯೇ ಇರಬೇಕೆಂದು ನಾವು ಕೆಲ ಗೆಳೆಯರು ಪ್ರಯತ್ನಿಸಿದರೂ ಅದು ಸಾಧ್ಯವಾಗಲಿಲ್ಲ. ಒಂದು ಸಲ ಅವರು ರಸ್ತೆಯಲ್ಲಿಯೇ ಆಯ ತಪ್ಪಿ ಬಿದ್ದು ಮೂರ್ಛೆ ಹೋದರು. ಆಗ ಅವರಿಗೆ ಸಹಾಯ ಮಾಡಿದವನು ಒಬ್ಬ ಪೊಲೀಸ್ ಕಾನ್‌ಸ್ಟೆಬಲ್. ಈ ಘಟನೆಯನ್ನು ಅವರು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಿದ್ದರು.

ಪತ್ನಿ ನಿಧನದ ನಂತರ ಏಕಾಂಗಿಯಾದ ರಂ.ಶಾ. ಅವರನ್ನು ಅವರ ಮಗ ಪುಣೆಗೆ ಕರೆದುಕೊಂಡು ಹೋದರು. ಒಂದೆರೆಡು ಕಾರ್ಯಕ್ರಮಗಳಿಗೆ ಅವರು ಬೆಳಗಾವಿಗೆ ಬರಬೇಕಾಗಿದ್ದರೂ ಆರೋಗ್ಯ ಸಹಕರಿಸಲಿಲ್ಲ.

ಈಗಂತೂ ಅವರು ಬರುವ ಹಾಗೇ ಇಲ್ಲ!

## ಸರಜೂ ಕಾಟ್ಕರ್

ಲೇಖಕ, ಅನುವಾದಕ, ಪತ್ರಕರ್ತ ಸರಜೂ ಕಾಟ್ಕರ್ ಹುಬ್ಬಳ್ಳಿಯವರು. ಪ್ರಸ್ತುತ ಬೆಳಗಾವಿಯಲ್ಲಿ ನೆಲಸಿರುವ ಅವರು ಕತೆ, ಕವಿತೆ, ನಾಟಕ, ಕಾದಂಬರಿ ಪ್ರಕಾರಗಳಲ್ಲಿ ಬರೆಯುತ್ತ ಬಂದಿದ್ದಾರೆ. ಅವರ ಮೊದಲ ಕವನ ಸಂಗ್ರಹ 'ಹಸಿದ ನೆಲ'. 'ಕಾದಂಬರಿ ಜಗತ್ತಿನಲ್ಲಿ ದೇವರಾಯ', 'ಬಾಜಿರಾವ್ ಮಸ್ತಾನಿ', 'ಜುಲೈ 22, 1947', 'ಸಾವಿತ್ರಿಬಾಯಿ ಪುಲೆ', 'ಗೌರಿಪುರ' ಕಾದಂಬರಿಗಳನ್ನು ಬರೆದಿದ್ದಾರೆ. ಈ ಐದೂ ಕಾದಂಬರಿಗಳು ಸಿನಿಮಾ ಆಗಿವೆ. ಅವರ ಕಥಾಸಂಕಲನಗಳು, 'ಹೇಳಲಾಗದ ಕಥೆಗಳು' 'ಅತೀತ'. 'ಮರಾಠಿ ದಲಿತ ಕಾವ್ಯ', 'ಅಟಲ ಬಿಹಾರಿ ವಾಜಪೇಯಿ ಕವಿತೆಗಳು', 'ಬಾಂಬ್ ವಿರೋಧಿ ಪಾಕಿಸ್ತಾನಿ ಕವಿತೆಗಳು', 'ತಸ್ಲಿಮ್ ನಜ್ರೀನ್ ಕವಿತೆಗಳು' ಅವರ ಅನುವಾದಿತ ಕವಿತೆಗಳ ಸಂಗ್ರಹಗಳು. 'ಅಂಬೆ' ಅವರ ನಾಟಕ.